ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:ಹೆರೂರು ಕೆರೆಯ ಮೂಲಕ ಗುಬ್ಬಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ-15 ರ ಅಭಿವೃದ್ಧಿ ಕಾಮಗಾರಿಯ ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

*****

ಓದಲಾಗಿದೆ:-

1. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾನೀನಿನಿ/ತಾಂತ್ರಿಕ-4/D-15 TBC/Herur Tank/2021-22/771, ದಿನಾಂಕ:05-08-2021
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾನೀನಿನಿ/ತಾಂತ್ರಿಕ-4/ಸರ್ಕಾರದ ಪತ್ರಗಳು/ D-12 & D-15 /2021-22/2731, ದಿನಾಂಕ:30-12-2021.

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಇವರು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆ ಅಡಿ ಬರುವ ವಿತರಣಾ ನಾಲೆ 15 ರ ಉದ್ದವು 13.43 ಕಿ.ಮೀ. ಹಾಗೂ ಅಚ್ಚುಕಟ್ಟು 10,939.39 ಎಕರೆಗಳಾಗಿದ್ದು, ಖಾರೀಫ್ ಬೆಳೆಗೆ ಶೇ.68.50 ರಷ್ಟು ಅಚ್ಚುಕಟ್ಟು ಪ್ರದೇಶವನ್ನು (7,795.60 ಎಕರೆ) ಪರಿಗಣಿಸಲಾಗಿದ್ದು, ಇದರೊಂದಿಗೆ ಶೇ.25 ರಷ್ಟು Rush Irrigation ಮತ್ತು ಶೇ.15 ರಷ್ಟು ಹರಿಯುವಿಕೆ ನಷ್ಟವು ಸೇರಿದಂತೆ 70.04 ಕ್ಯೂಸೆಕ್ಸ್ ನೀರಿನ ಅವಶ್ಯಕತೆ ಇರುತ್ತದೆ; ಸದರಿ ವಿತರಣಾ ನಾಲೆಯ ಪಂಕ್ತೀಕರಣದಲ್ಲಿ ಹೆರೂರು ಕೆರೆಗೆ ನೀರು ಹರಿಸುವ ಮೈನರ್ ನಂ.7 ಕ್ಕೆ ಮೊದಲು ಒಟ್ಟು 11 ಮೈನರ್ ಗಳು, ಉಪ ವಿತರಣಾ ನಾಲೆ 1, ಉಪ ವಿತರಣಾ ನಾಲೆ 2 ಮತ್ತು 2 ನೇರ ತೂಬುಗಳು ಇರುತ್ತವೆ ಎಂದು ತಿಳಿಸಿರುತ್ತಾರೆ.

2. ಹೆರೂರು ಕೆರೆಯ ಸಾಮರ್ಥ್ಯ 47.64 ಎಂ.ಸಿ.ಎಫ್.ಟಿ. ಆಗಿದ್ದು, ಸರ್ಕಾರಿ ಆದೇಶ ಸಂಖ್ಯೆ:ನೀಇ 290 ಎನ್.ಹೆಚ್.ಪಿ. 1999, ದಿನಾಂಕ:10-03-2000 ರಲ್ಲಿ ಗುಬ್ಬಿ ಪಟ್ಟಣಕ್ಕೆ ಶಾಶ್ವತವಾದ ನೀರು ಸರಬರಾಜು ಯೋಜನೆಯಡಿಯಲ್ಲಿ ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ-15 ರಿಂದ 40 ಎಂ.ಸಿ.ಎಫ್.ಟಿ. ನೀರನ್ನು ಹಂಚಿಕೆ ಮಾಡಲಾಗಿದೆ.

3. ವಿತರಣಾ ನಾಲೆ-15 ರ ವಿನ್ಯಾಸಿತ ಸಾಮರ್ಥ್ಯ 70.00 ಕ್ಯೂಸೆಕ್ಸ್ ಆಗಿದ್ದು, ನಾಲೆಯ ಘೋಷಿತ ಅಚ್ಚುಕಟ್ಟು ಪ್ರದೇಶವು 4,295.04 ಹೆಕ್ಟೇರ್ ಆಗಿರುತ್ತದೆ; ವಿತರಣಾ ನಾ ಲೆ-15 ರಡಿ ಹೆರೂರು ಕೆರೆಯು

ಒಳಗೊಂಡಂತೆ 11 ಕೆರೆಗಳು ಬರುತ್ತಿದ್ದು, ಸದರಿ ಕೆರೆಗಳ ಒಟ್ಟು ಸಾಮರ್ಥ್ಯ 136.55 ಎಂ.ಸಿ.ಎಫ್.ಟಿ. ಗಳಾಗಿರುತ್ತದೆ. ವಿತರಣಾ ನಾಲೆ-15 ರ ಮೈನರ್ ಸಂಖ್ಯೆ-7 ರ ಮುಖಾಂತರ ಹೆರೂರು ಕೆರೆಗೆ ನೀರನ್ನು ಹರಿಸಬೇಕಾಗಿರುತ್ತದೆ; ನಾಲೆಯಲ್ಲಿ ನೀರು ಹರಿಸುವ ಸಂದರ್ಭದಲ್ಲಿ ಉಪ ವಿತರಣಾ ನಾಲೆಗಳ ತೂಬುಗಳ ಮುಖಾಂತರ ರೈತರು ಕೆರೆ ಕಟ್ಟೆಗಳಿಗೆ ಮತ್ತು ತೋಟ, ಜಮೀನುಗಳಿಗೆ ನೀರು ಹರಿಸಿಕೊಳ್ಳುವುದರಿಂದ, ನಿಗದಿತ ಅವಧಿಯಲ್ಲಿ ಹೆರೂರು ಕೆರೆಗೆ ಅವಶ್ಯಕ ಪ್ರಮಾಣದ ನೀರು ತುಂಬಿಸುವುದು ಕಷ್ಟ ಸಾಧ್ಯವಾಗಿರುತ್ತದೆ ಎಂದು ತಿಳಿಸುತ್ತಾ, ವಿತರಣಾ ನಾಲೆ-15 ರ ವ್ಯಾಪ್ತಿಯಲ್ಲಿ ಬರುವ ಘೋಷಿತ ಅಚ್ಚುಕಟ್ಟು ಪ್ರದೇಶಕ್ಕೆ ಕೊನೆಯ ಹಂತದವರೆಗೆ ನೀರು ಒದಗಿಸಲು ಹಾಗೂ ಹೆರೂರು ಕೆರೆಯ ಮೂಲಕ ಗುಬ್ಬಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ-15 ರ ಅಭಿವೃದ್ಧಿ ಕಾಮಗಾರಿಯ ರೂ.22.00 ಕೋಟಿ ಮೊತ್ತದ ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

4. ಸದರಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು 2018-19ನೇ ಸಾಲಿನ ಜಲಸಂಪನ್ಮೂಲ ಇಲಾಖೆಯ ದರಸೂಚಿ ಹಾಗೂ 2018-19 ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಸೂಚಿಯನ್ವಯ ರೂ.22.00 ಕೋಟಿ ಮೊತ್ತಕ್ಕೆ ತಯಾರಿಸಲಾಗಿರುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರಸ್ತಾವನೆಗೆ ದಿನಾಂಕ:29-09-2020 ರಂದು ನಡೆದ ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿಯು 10ನೇ ಸಭೆಯಲ್ಲಿ ತೀರುವಳಿ ನೀಡಿದ್ದು, ದಿನಾಂಕ:22-07-2021 ರಂದು ನಡೆದ ನಿಗಮದ ಮಂಡಳಿಯ 73ನೇ ಸಭೆಯಲ್ಲಿ ಅನುಮೋದನೆಯಾಗಿದ್ದು, ಆಡಳಿತಾತ್ಮಕ ಅನುಮೋದನೆ ನೀಡಲು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ಕೋರಿರುತ್ತಾರೆ.

5. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ:ಜಸಂಇ 65 ಎನ್ ಹೆಚ್ ಪಿ 2021,**
**ಬೆಂಗಳೂರು, ದಿನಾಂಕ:19-05-2022**

ಹೆರೂರು ಕೆರೆಯ ಮೂಲಕ ಗುಬ್ಬಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ-15 ರ ಅಭಿವೃದ್ಧಿ ಕಾಮಗಾರಿಯ ರೂ.22.00 ಕೋಟಿ ಮೊತ್ತದ ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 451 ಆಕೋ-1/2021, ದಿನಾಂಕ:20-04-2022 ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ:ಪಿಡಿಎಸ್ 28 ಎಂಸಿಎಂ 2021-ಪಿಪಿಡಿ, ದಿನಾಂಕ:21-10-2021 ರಲ್ಲಿ ನೀಡಲಾದ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

19/05/2022
( ಮನೋಹರ ವೈ. ರೊಟ್ಟೆ )
ವಿಶೇಷ ಕರ್ತವ್ಯಾಧಿಕಾರಿ
ಜಲಸಂಪನ್ಮೂಲ ಇಲಾಖೆ

ಪ್ರತಿಯನ್ನು:-

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ಕಾನೀನಿನಿ, ತುಮಕೂರು.
4. ನಿರ್ದೇಶಕರು, ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
5. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-256/2022, ದಿನಾಂಕ:12-05-2022).
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

+++++